**ECA .No. 22/2024**
**PW:01**

**ಸಾಕ್ಷಿಯನ್ನು ದಿಃ *14/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಪಾಟೀ ಸವಾಲು : ಶ್ರೀ ಎ.ಎಸ್.ಶಿಂದೆ ಎದುರುದಾರರ ಪರ ವಕೀಲರಿಂದ***

ನಾನು ಇಂಜನಿಯರ್ ಪದವಿಯನ್ನು ಪೂರ್ಣಗೊಳಿಸಿಲ್ಲ. ಬಜಾಜ ಶೋರೂಮಿನಲ್ಲಿ ನಾನು ದಿನಾಂಕಃ 15-02-2021 ರಲ್ಲಿ ಸರ್ವಿಸ ಮ್ಯಾನೆಜರ್ ಎಂದು ಕೆಲಸಕ್ಕೆ ಸೇರಿಕೊಂಡಿದ್ದೆ. ಸದರಿ ಶೋರೂಮಿನಲ್ಲಿ ಯಾವುದಾದರೂ ವಾಹನ ಸರ್ವಿಸಗೆ ಬಂದರೆ ಅದರ ಸಮಯ ಮತ್ತು ದಿನಾಂಕ ನಮೂದು ಮಾಡಿ ಒಳಗಡೆ ಬಿಟ್ಟುಕೊಳ್ಳುತ್ತೇವೆ ಎಂದರೆ ನಿಜ. ಸದರಿ ವಾಹನದ ಕುರಿತು ಜಾಬ ಕಾರ್ಡನ್ನು ಅದರ ಮಾಲೀಕರಿಗೆ ಕೊಡಲಾಗುತ್ತದೆ ಎಂದರೆ ನಿಜ. ಅದರ ಪ್ರಕಾರ ಮುಂದುವರೆದ ಕ್ರಮ ಕೈಗೊಳ್ಳಲಾಗುತ್ತದೆ ಎಂದರೆ ನಿಜ. ಸರ್ವಿಸ ಆದ ನಂತರ ಸದರಿ ವಾಹನವನ್ನು ಮಾಲೀಕರಿಗೆ ಒಪ್ಪಿಸಬೇಕಾದರೆ ಎಲ್ಲಾ ಕ್ರಮಗಳು ಆನ ಲೈನ ನಲ್ಲಿ ನಮೂದಿಸಿ ಅವರಿಗೆ ಒಪ್ಪಿಸುತ್ತಾರೆ ಎಂದರೆ ನಿಜ. ದುರಸ್ತಿ ಮಾಡಿದ ನಂತರ ಮಾಲೀಕರನ್ನು ಕರೆದು ಟೆಸ್ಟ ಡ್ರೈವ ಮಾಡಿ ನಂತರ ವಾಹವನ್ನು ಒಪ್ಪಿಸಲಾಗುತ್ತದೆ ಎಂದರೆ ನಿಜ. ಹೀಗೆ ಎಲ್ಲವೂ ಸರಿ ಇದೆ ಎಂದು ಖಚಿತ ಪಡಿಸಿಕೊಂಡ ನಂತರವೇ ಬಿಡುಗಡೆ ಮಾಡುತ್ತೇವೆ ಎಂದರೆ ನಿಜ.

ಮೊಟರ ಸೈಕಲ ನಂ.ಕೆಎ 25 ಎಚ್ ಇ 3631 ಮಾಲೀಕರಿಗೆ ಸಹ ಜಾಬ ಕಾರ್ಡನ್ನು ನೀಡಲಾಗಿತ್ತು. ಸದರಿ ವಾಹನ ದಿನಾಂಕಃ 24-12-2022 ರಂದು ಬೆಳಿಗ್ಗೆ 9.00 ಗಂಟೆ ಸುಮಾರಿಗೆ ದುರಸ್ತಿಗೆ ಬಂತು. ಸದರಿ ವಾಹನ ಮಾಲೀಕರಿಗೆ ಹಸ್ತಾಂತರಿದ್ದು ಯಾವ ಸಮಯದಲ್ಲಿ ಎಂದು ನನಗೆ ಹೇಳಲು ಆಗುವುದಿಲ್ಲ ಕಾರಣ ಸದರಿ ವಾಹನದಲ್ಲಿ ಸಮಸ್ಯೆ ಇರುವ ಕಾರಣ ಟೆಸ್ಟ ಡ್ರೈವಗೆ ಹೋಗುವಾಗ ನನಗೆ ಅಪಘಾತವಾಯಿತು ಎಂದು ಉತ್ತರಿಸುತ್ತಾರೆ.

ಅಪಘಾತದ ಕುರಿತು ಯಾರು ಯಾರ ವಿರುದ್ಧ ದೂರನ್ನು ಸಲ್ಲಿಸಿದ್ದರು ನನಗೆ ಗೊತ್ತಿಲ್ಲ. ಸದರಿ ವಾಹನದಿಂದ ಅಪಘಾತವು ವಾಹಿದ ಎನ್ನುವವರ ತಪ್ಪಿನಿಂದ ಆಗಿದೆ ಎಂದು ಅವರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದರೆ ಸಾಕ್ಷಿದಾರರು ಅವರ ತಪ್ಪು ಇರಲಿಲ್ಲ ಎಂದು ಉತ್ತರಿಸುತ್ತಾರೆ. ಈ ರಿಲತಿ ವಾಹಿದ ಇವರ ತಪ್ಪು ಇಲ್ಲ ಎಂದು ಮತ್ತು ಎದುರುಗಡೆ ಬಂದ ವಾಹನದ ತಪ್ಪು ಇದೆ ಎಂದು ನಾವು ಇಲ್ಲಿಯವರೆಗೂ ಈ ರೀತಿ ದೂರನ್ನು ನೀಡಿಲ್ಲ. ವಾಹಿದ ಅವರಿಗೆ ವಾಹನ ಚಾಲನಾ ಪತ್ರ ಇರುವುದು ನನಗೆ ಗೊತ್ತಿಲ್ಲ. ಅಪಘಾತವು ಹುಬ್ಬಳ್ಳಿ ಧಾರವಾಡ ಬಿ ಆರ್ ಟಿ ಎಸ್ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ನಿಜ. ಸದರಿ ರಸ್ತೆ ಸಾರ್ವಜನಿಕ ರಸ್ತೆ ಇರುವುದಿಲ್ಲ ಎನ್ನುವ ವಿಷಯ ಸಂಗತಿ ನನಗೆ ಗೊತ್ತು. ಅಪಘಾತವಾದ ಬಗ್ಗೆ ನಾವು ಮಾಲೀಕರಿಗೆ ಲಿಖಿತ ರೂಪದಲ್ಲಿ ಯಾವುದೇ ನೋಟಿಸ್ಸ ಕೊಟ್ಟಿಲ್ಲ. ಅಪಘಾತ ಆಗಿರುವ ಕುರಿತು ನನಗೆ ಪರಿಹಾರದ ಹಣ ಸೀಗಬೇಕು ಎಂದು ಸಹ ಲಿಖಿತ ರೂಪದಲ್ಲಿ ಯಾವುದೇ ಬೇಡಿಕೆ ನೋಟಿಸ್ಸ ಕೊಟ್ಟಿಲ್ಲ. ಅಪಘಾತವಾದ ಬಗ್ಗೆ ನಾನು ಮಾಲೀಕರನ್ನು ಭೇಟಿಯಾಗಿಲ್ಲ, ಅವರೇ ಬಂದು ವಿಚಾರಿಸಿರುತ್ತಾರೆ ಆದರೆ ಇಲ್ಲಿಯವರೆಗೂ ಯಾವುದೇ ರೀತಿಯ ಪರಿಹಾರ ಹಣ ಕೊಟ್ಟಿಲ್ಲ. ಸದರಿ ಮಾಲೀಕರು ನಿನ್ನ ಆರೋಗ್ಯ ಸ್ಥಿತಿಯ

ಕುರಿತು ವಿಚಾರಿಸಿದ್ದಿರಾ ಎನ್ನುವ ಪ್ರಶ್ನೇಗೆ ಸಾಕ್ಷಿದಾರರು ಇಲ್ಲಿಯವರೆಗೂ ಅದನ್ನು ವಿಚಾರಿಸಿಲ್ಲ ಎಂದು ಉತ್ತರಿಸಿದ್ದಾರೆ.

**<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.

***ಪಾಟೀ ಸವಾಲು : ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಹಾಜರಿರುವುದಿಲ್ಲ ಹಾಗೂ ಯಾರೂ ಪ್ರತಿನಿಧಿಸಿರುವುದಿಲ್ಲ. ನ್ಯಾಯತಾ ದೃಷ್ಟಿಯಿಂದ ಅವರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.***

***ಪಾಟೀ ಸವಾಲು : ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಹಾಜರಿರುವುದಿಲ್ಲ ಹಾಗೂ ಯಾರೂ ಪ್ರತಿನಿಧಿಸಿರುವುದಿಲ್ಲ. ಕಾರಣ ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.***

ಸಾಕ್ಷಿದಾರರ ಮತ್ತು ಅಣ್ಣ ಮತ್ತು ತಾಯಿ ಇವರ ಆಧಾರಕಾರ್ಡನ ನಕಲುಗಳ ಪ್ರತಿ ಸಲ್ಲಿಸಿದ್ದು, ಅವುಗಳನ್ನು ಮೂಲ ಪ್ರತಿಯೊಂದಿಗೆ ತುಲನೆ ಮಾಡಿ ನೋಡಿ, ಸರಿಯಿದೆ ಎಂದು ಖಚಿತ ಪಡಿಸಿಕೊಂಡು, ಸದರಿ ನಕಲುಗಳನ್ನು ಪ್ರತಿಯನ್ನು ನಿ.ಪಿ.9 ರಿಂದ 11 ಎಂದು ಗುರುತಿಸಿ ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ದೈನಂದಿನ ಕೆಲಸಕ್ಕೆ ಅವಶ್ಯವಿರುವ ಕಾರಣ ಮರಳಿ ಕೊಡಲಾಗಿದೆ.